ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 21/11/20

# ಕೊರೋನಾ ಲೆಟರ್ ಬಾಂಬ್!

## ಕಿಡಿಗೇಡಿಗಳಿಂದ ಕೊರೋನಾ ಸೋಂಕು ಇರುವ ಪತ್ರ ರಾಜಕಾರಣಿಗಳಿಗೆ ರವಾನೆ ಭೀತಿ

## ಭಾರತವೂ ಸೇರಿದಂತೆ ಹಲವು ರಾಷ್ಟ್ರಗಳಿಗೆ ಇಂಟರ್‌ಪೋಲ್‌ನಿಂದ ಎಚ್ಚರಿಕೆಯ ಸಂದೇಶ

**ನವದೆಹಲಿ:** ರಾಜಕಾರಣಿಗಳೇ... ದಯವಿಟ್ಟು ಗಮನಿಸಿ. ಪತ್ರ ಬಂದಿವೆ ಎಂದು ಕುತೂಹಲದಿಂದ ತೆರೆದು ನೋಡುತ್ತೀರಾ? ಹಾಗಿದ್ದರೆ ಎಚ್ಚರಿ ವಹಿಸಿ. ಅದು ಕೊರೋನಾ ಸೋಂಕು ಹರಡುವ ಪತ್ರವೂ ಆಗಿರಬಹುದು!

ಜಾಗತಿಕ ಪೊಲೀಸ್ ಸಂಘಟನೆಯಾಗಿರುವ ಇಂಟರ್‌ಪೋಲ್ ಇಂತಹದ್ದೊಂದು ಎಚ್ಚರಿಕೆ ಸಂದೇಶವನ್ನು ಭಾರತ ಸೇರಿದಂತೆ ತನ್ನ 194 ಸದಸ್ಯ ರಾಷ್ಟ್ರಗಳಿಗೆ ಹೊರಡಿಸಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ.

ಕೊರೋನಾ ಸೋಂಕು ಒಳಗೊಂಡ ಪತ್ರ ರಾಜಕಾರಣಿಗಳು ಹಾಗೂ ಇನ್ನಿತರೆ ವ್ಯಕ್ತಿಗಳಿಗೆ ರವಾನೆಯಾಗಬಹುದು. ರಾಜಕಾರಣಿಗಳ ಮೇಲೆ ದಾಳಿ ಮಾಡುವ ಉದ್ದೇಶದಿಂದಲೇ ಇಂತಹ ಕೃತ್ಯ ನಡೆಯಬಹುದು. ಈಗಾಗಲೇ ಉದ್ದೇಶಪೂರ್ವಕವಾಗಿ ನಿರ್ದಿಷ್ಟ ಸ್ಥಳಗಳಲ್ಲಿ ಉಗುಳುವ, ಕೆಮ್ಮುವ ಘಟನೆಗಳು ವರದಿಯಾಗಿವೆ. ಜೊತೆಗೆ ಆನ್‌ಲೈನ್‌ನಲ್ಲೇ ಸೋಂಕಿತರ ದೇಹ ದ್ರವ ಮಾರಾಟಕ್ಕಿರುವುದಾಗಿ ಹೇಳಿರುವ ಪ್ರಕರಣ ಕೂಡಾ ಬೆಳಕಿಗೆ ಬಂದಿದೆ ಎಂದು ಇಂಟರ್‌ಪೋಲ್ ತಿಳಿಸಿದೆ.

ಆದರೆ ಪತ್ರ ಬರೆದು ಕೊರೋನಾ ಹಬ್ಬಿಸುವ ಯಾವುದಾದರೂ ಪ್ರಕರಣ ಜಗತ್ತಿನಲ್ಲಿ ನಡೆದಿದೆಯೇ ಎಂಬ ಬಗ್ಗೆ ಯಾವುದೇ ನಿದರ್ಶನವನ್ನು ಪ್ರಸ್ತಾಪಿಸಿಲ್ಲ. ಈ ರೀತಿಯ ಕೃತ್ಯಗಳನ್ನು ಯಾರು ಮಾಡಬಹುದು ಎಂಬ ಬಗ್ಗೆಯೂ ಉಲ್ಲೇಖಿಸಿಲ್ಲ ಎಂದು ವರದಿಗಳು ತಿಳಿಸಿವೆ.

ರಾಜಕಾರಣಿಗಳು ಹಾಗೂ ಗಣ್ಯ ವ್ಯಕ್ತಿಗಳ ಭದ್ರತೆಗೆ ನಿಯೋಜನೆಗೊಂಡಿರುವ ವ್ಯಕ್ತಿಗಳು ಇಂತಹ ಅಪಾಯಗಳನ್ನು ಅರಿತುಕೊಂಡಿರಬೇಕು. ಯಾವುದಾದರೂ ವ್ಯಕ್ತಿ ಅಸಹಕಾರ ಧೋರಣೆಯಿಂದ ಹತ್ತಿರ ಬಂದರೆ ಹೆಚ್ಚು ಎಚ್ಚರಿಕೆ ವಹಿಸಬೇಕು. ಪಿಪಿಇ ಕಿಟ್ ಧರಿಸಬೇಕು. ಅಂಚೆ ಇಲಾಖೆ ಹಾಗೂ ಕಚೇರಿಗಳಲ್ಲಿ ಪತ್ರ ವಿಲೇವಾರಿ ಮಾಡುವವರಿಗೆ ಶಂಕಾಸ್ಪದ ಪಾರ್ಸೆಲ್‌ಗಳು ತಂದೊಡ್ಡುವ ಇಂತಹ ಅಪಾಯದ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ಮಾಡಿದೆ.

ಇದಲ್ಲದೆ ಕೊರೋನಾ ಸೋಂಕಿತರು ಬೇಕಂತಲೆ ಕೊರೋನಾ ಪ್ರದೇಶದಿಂದ ಕೊರೋನಾದಿಂದ ಮುಕ್ತವಾಗಿರುವ ಪ್ರದೇಶಗಳಿಗೆ ಹೋಗಬಹುದು. ಆ ಬಗ್ಗೆಯೂ ಎಚ್ಚರಿಕೆ ಇರಬೇಕು ಎಂದು ಹೇಳಿದೆ.

ಕಾನೂನು ಜಾರಿ ಅಧಿಕಾರಿಗಳು, ವೈದ್ಯರು ಹಾಗೂ ಅವಶ್ಯ ಸೇವೆ ಸಿಬ್ಬಂದಿಗಳನ್ನು ಬೆದರಿಸಲು ಅವರ ಮೇಲೆ ಉಗುಳಿದ ಮತ್ತು ಕೆಮ್ಮಿದ ಪ್ರಕರಣಗಳನ್ನು ಇಂಟರ್‌ಪೋಲ್ ಪ್ರಸ್ತಾಪಿಸಿದೆ.



### ಎಚ್ಚರಿಕೆ ನೀಡಲು ಕಾರಣಗಳು?

- ಅಧಿಕಾರಿಗಳು, ವೈದ್ಯರು, ಆವಶ್ಯ ಸೇವೆ ಸಿಬ್ಬಂದಿ ಬೆದರಿಸಲು ಅವರ ಮೇಲೆ ಉಗುಳಿದ, ಕೆಮ್ಮಿದ ಪ್ರಕರಣ
- ಪತ್ರದ ಮೂಲಕ ಸೋಂಕು ಹಬ್ಬಿಸುವ ಎಚ್ಚರಿಕೆಗಳು ರವಾನೆಯಾಗಿರುವುದು
- ಆನ್‌ಲೈನ್‌ನಲ್ಲೇ ಸೋಂಕಿತರ ದೇಹ ದ್ರವ ಮಾರಾಟಕ್ಕಿರುವುದಾಗಿ ಹೇಳಿಕೊಂಡಿರುವುದು

## ಕೋವ್ಯಾಕ್ಸಿನ್ ಲಸಿಕೆ 3ನೇ ಹಂತದ ಪ್ರಯೋಗಕ್ಕೆ ಒಳಗಾದ ಹರ್ಯಾಣ ಸಚಿವ



**ಅಂಬಾಲ:** ಭಾರತ್ ಬಯೋಟೆಕ್ ಸಂಶೋಧಿಸಿದ 'ಕೋವ್ಯಾಕ್ಸಿನ್'ನ 3ನೇ ಹಂತದ ಪ್ರಯೋಗ ಶುಕ್ರವಾರ ಹರ್ಯಾಣದಲ್ಲಿ ಆರಂಭವಾಗಿದ್ದು, ಇಲ್ಲಿನ ಆರೋಗ್ಯ ಸಚಿವ ಅನಿಲ್ ವಿಜ್ ಮೊದಲ ಪ್ರಯೋಗಾತ್ಮಕ ಲಸಿಕೆ ಪಡೆದು ಮಾದರಿಯಾಗಿದ್ದಾರೆ! ಸಾರ್ವಜನಿಕ ಆಸ್ಪತ್ರೆಯಲ್ಲಿ 67 ವರ್ಷದ ವಿಜ್ ಲಸಿಕೆ ಚುಚ್ಚಿಸಿಕೊಂಡಿದ್ದಾರೆ. ಆ ಮೂಲಕ ಪ್ರಯೋಗ ಹಂತದಲ್ಲಿರುವ ಲಸಿಕೆ ಪಡೆದ ದೇಶದ ಮೊದಲ ಸಚಿವ ಎಂಬ ಖ್ಯಾತಿ ತಮ್ಮದಾಗಿಸಿಕೊಂಡಿದ್ದಾರೆ.

## ಲಸಿಕೆ ಹಂಚಿಕೆ ಬಗ್ಗೆ ಮೋದಿ ಸಭೆ

**ನವದೆಹಲಿ:** ಕೊರೋನಾ ಸೋಂಕಿತರಿಗೆ ಯಾವ ಮಾನದಂಡದ ಮೇಲೆ ಲಸಿಕೆ ನೀಡಬೇಕು ಎಂಬ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸಭೆ ನಡೆಸಿದರು. ಈ ಸಭೆಯಲ್ಲಿ ಯಾವೆಲ್ಲಾ ನಾಗರಿಕರಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡಬೇಕು. ಅಲ್ಲದೆ ಅಭಿವೃದ್ಧಿ, ನಿಯಂತ್ರಣ ಮತ್ತು ಅನುಮೋದನೆ ಹಾಗೂ ಸಂಗ್ರಹಣೆಯ ಪ್ರಕ್ರಿಯೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದಿದ್ದಾರೆ ಮೋದಿ.

## ಇಡೀ ಹಳ್ಳಿ ಮಂದಿಗೆಲ್ಲಾ ಕೊರೋನಾ!

### ನಿಯಮ ಪಾಲಿಸಿದ ಓರ್ವ ಮಾತ್ರ ಬಚಾವ್

**ಶಿಮ್ಲಾ:** ಸಣ್ಣ ಹಳ್ಳಿಗಳಲ್ಲಿ ಒಬ್ಬಿಬ್ಬರಿಗೆ ಕೊರೋನಾ ಬರೋದು ಹೊಸದಲ್ಲ. ಆದರೆ ಹಿಮಾಚಲ ಪ್ರದೇಶದಲ್ಲಿ ಹಳ್ಳಿಯೊಂದಲ್ಲಿ ಒಬ್ಬರನ್ನು ಬಿಟ್ಟು ಉಳಿದೆಲ್ಲರಿಗೂ ಸೋಂಕು ಹಬ್ಬಿದೆ. ಥೋರಾಂಗ್ ಎಂಬ ಗ್ರಾಮದಲ್ಲಿ ಇತ್ತೀಚೆಗೆ ಧಾರ್ಮಿಕ ಕಾರ್ಯಕ್ರಮ ನಡೆದಿತ್ತು. ಅದರಲ್ಲಿ ಭಾಗಿಯಾಗಿದ್ದ ವ್ಯಕ್ತಿಯೊಬ್ಬರಿಗೆ ಸೋಂಕು ಕಾಣಿಸಿಕೊಂಡಿತ್ತು. ಬಳಿಕ ಉಳಿದವರಿಗೂ ಪರೀಕ್ಷೆ ನಡೆಸಿದಾಗ ಎಲ್ಲಾ 42 ಜನರಿಗೂ ಸೋಂಕು ಖಚಿತಪಟ್ಟಿದೆ. ಆದರೆ, ಕೊರೋನಾ ನಿಯಂತ್ರಣದ ಮಾರ್ಗೋಪಾಯ ಪಾಲಿಸಿ ಸೋಂಕಿಂದ ಪಾರಾಗಿದ್ದೇನೆ ಎಂದಿದ್ದಾರೆ ಭೂಷಣ್.